**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು**

**ಸಿ.ಸಿ ನಂ.44/2023**

| | | |
|---|---|---|
| ಸಾಕ್ಷಿದಾರರ ಹೆಸರು | – ರಾಘವೇಂದ್ರ | ಸಿಡಬ್ಲ್ಯೂ-3 |
| ತಂದೆ ಹೆಸರು | – ಕೃಷ್ಣ ಮೂರ್ತಿ | ಪಿಡಬ್ಲ್ಯೂ-3 |
| ವಯಸ್ಸು | – 42 ವರ್ಷ | |
| ಉದ್ಯೋಗ | – ಕೂಲಿ ಕೆಲಸ | |
| ವಾಸ | – ಕೆ ಆರ್ ಪುರ | |

**ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.1 ನನ್ನ ಅಕ್ಕ . ಚಾಸಾ.2 ನನ್ನ ಅತ್ತೆ. ಚಾಸಾ.4, 5 ರವರು ಗೊತ್ತು. ಆರೋಪಿ ನನಗೆ ಗೊತ್ತು. ಆರೋಪಿತರು ನಮಗೆ ಜಗಳ ಮಾಡಿಲ್ಲ, ಹೊಡೆದಿಲ್ಲ ಬಡಿದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಚಾಸಾ.1 ರವರ ಬಟ್ಟೆ ಹಿಡಿದು ಎಳೆದಾಡಿಲ್ಲ, ಬೆದರಿಕೆ ಹಾಕಿಲ್ಲ, ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ08.10.2022 ರಂದು ಸುಮಾರು 8.30 ರ ಸಮಯದಲ್ಲಿ ಹಿರಿಯೂರು ತಾ ಪುಟ್ಟಯ್ಯನಕಟ್ಟೆ ಗ್ರಾಮದ ಜಗನ್ನಾಥರವರ ಅಂಗಡಿ ಮುಂದಿನ ಟಾರ್ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ ನನಗೆ ಏನೋ ಸೂಳೆ ಮಾಗನೆ ಬೋಳಿ ಮಗನೇ ನಾನು ಕೆಲಸಕ್ಕೆ ಬಾರದೆ ಇದ್ದರೂ ನೀನು ಹೋಗಿದ್ದೀಯ ಎಂದು ಆರೋಪಿ ಅವಾಚ್ಯ ಶಬ್ದಗಳಿಂದ ಬೈದಾಡಿ ಕೈಕಾಲುಗಳಿಂದ ಹೊಡೆದು ಕೊರಳು ಪಟ್ಟಿ ಹಿಡಿದು ಎಳೆದುಕೊಂಡು ಹೋಗುತ್ತಿದ್ದು ಈ ಬಗ್ಗೆ ಚಾಸಾ.1 ಮತ್ತು ಚಾಸಾ.2 ರವರು ಕೇಳಿದ್ದಕ್ಕೆ ಆರೋಪಿತರು ನಮಗೆ ಸೂಳೆ ಮುಂಡೆರ ಬೋಳಿ ಮುಂಡೆರಾ

ನಾನು ಕೆಲಸಕ್ಕೆ ಹೋಗದಿದ್ದರೆ ಅವನು ಸಹ ಕೆಲಸಕ್ಕೆ ಹೋಗಬಾರದು ಏಕೆ ಅವನು ಕೆಲಸಕ್ಕೆ ಹೋಗಿದ್ದಾನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾನೆ ಎಂದರೆ ಸರಿಯಲ್ಲ. ನನಗೆ ಪುನಃ ಆರೋಪಿ ಕೈಕಾಲುಗಳಿಂದ ಹೊಡೆದು ನೆಲಕ್ಕೆ ತಳ್ಳಿ , ಬಿಡಿಸಲು ಹೋದ ಚಾಸಾ.1 ರವರಿಗೆ ಕೈಕಾಲುಗಳಿಂದ ಹೊಡೆದು ಚಾಸಾ1 ರವರು ಧರಿಸಿದ್ದ ನೈಟಿ ಹರಿದು ಹಾಕಿ ಚಾಸಾ.2 ರವರಿಗೆ ಕಲ್ಲಿನಿಂದ ಹೊಡೆದು ಚಾಸಾ1 ಮತ್ತು ಚಾಸಾ.2 ರವರಿಗೆ ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಹೋಗುವಾಗ ಆರೋಪಿ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಚಾಸಾ1 ಮತ್ತು 2 ರವರು ಆಸ್ಪತ್ರೆಯಲ್ಲಿ ,ಚಿಕಿತ್ಸೆ ಪಡೆದು ನಾನು ಸ್ವತಃ ಉಪಚರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಪೊಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಹೇಳಿಕೆ ಭಾಗವನ್ನು ನಿಪಿ–4 ಎಂದು ಗುರುತಿಸಲಾಯಿತು. ನಾವು ಈಗ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಕಾರಣದಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ ವಿ ಆರ್ ವ ಕೀಲರಿಂದ–ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು